**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ ಬುಡ್ನಾ ಸಿದ್ದಿ ರವರ ನಿಯಮ 330ರಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:42ಕ್ಕೆ ಉತ್ತರ**

**ಪ್ರಶ್ನೆ:-** ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಅರಣ್ಯ ಪ್ರದೇಶದಲ್ಲಿ ಮತ್ತು ಅರಣ್ಯ ಅಂಚಿನಲ್ಲಿ ವಾಸಿಸುವ ಅನೇಕ ಜನಾಂಗಗಳಿವೆ. ಸರ್ಕಾರವು ಇವರಿಗೆ ಆಧಾರ ಕಾರ್ಡ, ರೇಷನ್ ಕಾರ್ಡ, ವೋಟರ್ ಕಾರ್ಡ ಮುಂತಾದ ಎಲ್ಲಾ ದಾಖಲೆಗಳನ್ನು ನೀಡಿದರೂ ಇಂದಿಗೂ ಅನೇಕ ಹಳ್ಳಿಗಳು ಮೂಲಭೂತ ಸೌಕರ್ಯಗಳಾದ ರಸ್ತೆ, ಮನೆ, ನೀರು, ವಿದ್ಯುತ್ ಮುಂತಾದವುಗಳಿಂದ ವಂಚಿತವಾಗಿರುತ್ತದೆ. ಸ್ವಂತ ಖರ್ಚಿನಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಕೂಡ ಅರಣ್ಯ ಇಲಾಖೆ ಪರವಾನಿಗೆ ನೀಡುತ್ತಿಲ್ಲ.

ಹೀಗಾಗಿ ಸ್ವಾತಂತ್ರ್ಯ ಪೂರ್ವದಿಂದಲೂ ವಾಸಿಸುವ ಈ ಜನಾಂಗಗಳು ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಪಡೆಯಲು ಅರಣ್ಯ ಇಲಾಖೆಯ ಮಾನವೀಯ ದೃಷ್ಟಿಯಿಂದ ಅವಕಾಶ ಮಾಡಿಕೊಡುವಂತೆ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

*****

**ಉತ್ತರ:**

ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅರಣ್ಯ ಪ್ರದೇಶದ ಅವಶ್ಯಕತೆ ಇದ್ದಲ್ಲಿ ಕುಡಿಯವ ನೀರು ಪೂರೈಕೆಗೆ ಪೈಪ್‌ಲೈನ್‌ಗಳನ್ನು ಅರಣ್ಯ ಪ್ರದೇಶದಲ್ಲಿ ಅಳವಡಿಸಬೇಕಾದ ಸಂದರ್ಭದಲ್ಲಿ, ವಿದ್ಯುತ್ ಸಂಪರ್ಕ ನೀಡಲು ತಂತಿಗಳನ್ನು ಅರಣ್ಯದಲ್ಲಿ ಎಳೆಯಬೇಕಾದಲ್ಲಿ, ಅಥವಾ ಅರಣ್ಯ ಪ್ರದೇಶದಲ್ಲಿ ರಸ್ತೆ, ನಿರ್ಮಾಣ ಮಾಡಲು, ಶೈಕ್ಷಣಿಕ ಕಟ್ಟಡಗಳ ನಿರ್ಮಾಣಕ್ಕೆ ಹಾಗೂ ಆಸ್ಪತ್ರೆ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಉಪಯೋಗಿ ಸಂಸ್ಥೆಯವರು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರಲ್ಲಿ www.parivesh.nic.in ವೆಬ್ ಪೋರ್ಟಲ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಿರುತ್ತದೆ. ಅರಣ್ಯ (ಸಂರಕ್ಷಣಾ) ಕಾಯ್ದೆ 1980, ನಿಯಮಗಳ ಮಾರ್ಗಸೂಚಿಯ ವಿವರಗಳು ಈ ಕೆಳಕಂಡಂತಿದೆ.

1. ಕೇಂದ್ರ ಸರ್ಕಾರವು ಅರಣ್ಯ (ಸಂರಕ್ಷಣಾ) ಕಾಯ್ದೆಯ 1980ರ ಪೂರ್ವದಲ್ಲಿಯೇ ಉಪಯೋಗಿಸುತ್ತಿದ್ದ, ಕಚ್ಚಾ ರಸ್ತೆಗಳನ್ನು ಉಪಯೋಗಿಸಲು ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅನುಮತಿ ಪಡೆದು ಉಪಯೋಗಿಸಲು ಕೇಂದ್ರ ಸರ್ಕಾರದ ದಿನಾಂಕ:09-11-2020ರ ಪತ್ರದಲ್ಲಿ ಅವಕಾಶ ಕಲ್ಪಿಸಲಾಗಿದೆ. **(ಪ್ರತಿ ಲಗತ್ತಿಸಿದೆ).**
2. ಅದರಂತಯೇ, 1980ಕ್ಕಿಂತಲೂ ಪೂರ್ವದಿಂದಲೂಉಪಯೋಗಿಸುತ್ತಿದ್ದ ವಿದ್ಯುತ್ ಮಾರ್ಗಗಳನ್ನು ದುರಸ್ತಿ ಪಡಿಸಲು ಸಂಬಂಧಿಸಿದ ಉಪಯೋಗಿ ಸಂಸ್ಥೆಯವರು ಆಯಾ ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಅನುಮತಿ ಪಡೆದು ಕಾರ್ಯ ನಿರ್ವಹಿಸಲು ಕೇಂದ್ರ ಸರ್ಕಾರದ ದಿನಾಂಕ:06-09-2021ರ ಪತ್ರದಲ್ಲಿ ಅವಕಾಶ ಕಲ್ಪಿಸಲಾಗಿದೆ. **(ಪ್ರತಿ ಲಗತ್ತಿಸಿದೆ).**

ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನವನಗಳಲ್ಲಿ ಅರಣ್ಯೇತರ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಿಂದ ನಿರ್ಬಂಧಗಳಿರುವುದಿಲ್ಲ.

ಈಗಾಗಲೇ ಇರುವ ರಸ್ತೆಗಳನ್ನು ಮೂಲ ಸ್ವರೂಪದಲ್ಲಿ ಬದಲಾಗದಂತೆ ದುರಸ್ತಿಗೊಳಿಸಲು ಇಲಾಖೆಯ ನಿರ್ಬಂಧಗಳಿರುವುದಿಲ್ಲ. ಆದರೆ, ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನವನಗಳಲ್ಲಿನ ಅರಣ್ಯೇತರ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಅರಣ್ಯ ಪ್ರದೇಶಗಳಲ್ಲಿ ಹೊಸದಾಗಿ ಮೂಲಭೂತ ಸೌಕರ್ಯಗಳಾದ ವಿದ್ಯುತ್ ಸಂಪರ್ಕ, ರಸ್ತೆ ನಿರ್ಮಾಣ, ಕುಡಿಯುವ ನೀರು ಮತ್ತು ಇತರೆ ಸೌಲಭ್ಯ ಕಲ್ಪಿಸಲು ಸಂಬಂಧಪಟ್ಟ ಉಪಯೋಗಿ ಸಂಸ್ಥೆಯವರು ವನ್ಯಜೀವಿ (ಸಂರಕ್ಷಣಾ) ಕಾಯ್ದೆ 1972ರನ್ವಯ ಅನುಮತಿ ಪಡೆಯಲು ಕೇಂದ್ರ ಸರ್ಕಾರದ https://parivesh.nic.in ವೆಬ್ ಪೋರ್ಟಲ್ ಮೂಲಕ ಪ್ರಸ್ತಾವನೆ ಸಲ್ಲಿಸಿ, ರಾಜ್ಯ ವನ್ಯಜೀವಿ ಮಂಡಳಿ/ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯಬೇಕಾಗಿರುತ್ತದೆ.

ಅರಣ್ಯ ಪ್ರದೇಶದಲ್ಲಿ ಮತ್ತು ಅರಣ್ಯ ಅಂಚಿನಲ್ಲಿ ವಾಸಿಸುವ ಅನೇಕ ಜನಾಂಗಳಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಮನೆ, ನೀರು, ವಿದ್ಯುತ್ ಮುಂತಾದವುಗಳನ್ನು ಸಂಬಂಧಿಸಿದ ಇಲಾಖೆಗಳು https://parivesh.nic.in ವೆಬ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದಲ್ಲಿ ಅರಣ್ಯ ಇಲಾಖೆಯಿಂದ ಅನುಮತಿ ನೀಡಲಾಗುವುದು.

**ಸಂಖ್ಯೆ: ಎಫ್‌ಇಇ 87 ಎಫ್‌ಎಲ್‌ಎಲ್ 2024 (ಇ)**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

File No.FC-11/117/2019-FC

Government of India
Ministry of Environment, Forest and Climate Change
(Forest Conservation Division)

Indira Paryavaran Bhawan,
Aliganj, Jorbagh Road,
New Delhi-110003
**Dated: 9th ~~October~~, 2020**
November

To

The Principal Secretary (Forests),
All State Governments/UT Administrations

**Sub: Retaining of guidelines dated 14.09.2004 and 30.04.2005 permitting repair and maintenance of roads constructed prior to 1980 – reg.**

Sir,

I am directed to refer to this Ministry's letter no.5-2/2017-FC dated 28th March, 2019 regarding Handbook of Forest (Conservation) Act, 1980 by consolidating all previous guidelines issued by the ministry. Representations have been received from the States to incorporate guidelines dated 14.09.2004 and 30.04.2005 in the revised Handbook for the sake of more clarity in the works related to repair and maintenance of roads constructed prior to 1980. In this connection, I am directed to inform that the matter has been examined in the Ministry and competent authority in the Ministry has approved that roads constructed on forest land prior to 25.10.1980 (date of enactment of FC Act, 1980), falling outside the Protected Areas, may be repaired and maintained and also black topping of the same may be done with prior permission of the State Forest Department subject to fulfillment of following conditions:

i. No breaking up of forest land or felling of tree shall be allowed;
ii. While black topping, adequate precautions should be undertaken by the User Agency to avoid any damage to flora and fauna. Fire for melting of coal tar and mixing shall be lit at a safe distance from the trees/vegetation and avoiding dry/hot seasons. Fuelwood, if required, shall be purchased in advance from the Depot of Forest Development Corporations;
iii. No crushing/breaking of stones shall be allowed inside forest areas. Readymade materials shall be used for up-gradation of such roads. No labour camp shall be allowed on the forest land
iv. No widening of the road is allowed. Both sides of the upgraded road shall be reinforced with brick/stone works, and vegetative measures to check soil erosion at the project cost in consultation with the Divisional Forest Officer;
v. Any other condition the Divisional Forest Officer may impose from time to time in the interest of forest conservation and protection.

Yours faithfully,

**(Sandeep sharma)**
Assistant Inspector General of Forests

**File No.FC-11/117/2019-FC**

Copy to:

1. The Principal Chief Conservator of Forests, All State Govts/UT Administrations
2. The Dy DGF (Central), All Regional Offices of the MoEF&CC
3. The APCCF & Nodal Officer (FCA), O/o the PCCF, All State/UT Governments
4. Monitoring Cell, FC Division, MoEF, New Delhi
5. Guard File

Signature Not Verified

Digitally signed by SANDEEP SHARMA
Date: 2020.11.09 13:34:48 IST

Government of India
Ministry of Environment, Forest and Climate Change
(Forest Conservation Division)
****

Indira Paryavaran Bhawan,
Aliganj, Jorbagh Road,
New Delhi-110003
Dated: 6th September, 2021

To
The Principal Secretary (Forests),
All State Governments/UT Administrations

**Sub: Allowing reconstruction of Transmission Lines in Forest area which are constructed prior to Forest (Conservation) Act 1980 without insisting for obtaining fresh approval.– regarding.**

Madam/Sir,

I am directed to refer to the letter no. CM/190/GoI/2021 dated 03.07.2021 received from Government of Karnataka requesting to allow execution/ re-construction and upgradation of transmission lines in the existing corridor in forest areas without insisting on fresh approvals.

2. In this regard it is informed that the matter was considered by the Forest Advisory Committee (FAC) in its meeting held on 16.08.2021. Based on the recommendation of the FAC and approval of the same by the competent authority, it is hereby clarified that the works related to repair and maintenance of transmission lines may be carried out, with prior permission of the State Forest Department subject to fulfillment of following conditions:

i. The transmission lines were constructed on forest land prior to 25.10.1980 (date of enactment of FC Act, 1980);
ii. These lines fall outside the Protected Areas;
iii. No breaking up of forest land or felling of tree shall be allowed;
iv. While carrying out repair and maintenance of transmission lines, adequate precautions should be undertaken by the user agency to avoid any damage to flora and fauna;
v. No crushing/breaking of stones shall be allowed inside forest areas. Ready-made materials shall be used for up-gradation of such lines and no new roads shall be constructed for the purpose of maintenance. However user agency may be allowed to use the existing forest roads and paths for the work;
vi. No labour camp shall be allowed on the forest land;
vii. No widening of the existing roads/paths in the forest area is allowed. The vegetation within the ROW shall not be disturbed;

viii. Any other condition the Divisional Forest Officer may impose from time to time in the interest of forest conservation and protection.

This issues with the approval of competent authority.

Yours faithfully,

*Sd/-*
**(Sandeep Sharma)**
**Assistant Inspector General of Forests**

Copy to:

1. The Principal Chief Conservator of Forests, All State Governments/UT Administrations.
2. The Regional Officers, All Integrated Regional Offices of the MoEFCC.
3. The APCCF & Nodal Officer (FCA), Forest Dept., All State Governments/UT Administrations
4. Monitoring Cell, FC Division, MoEF, New Delhi.